ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದಲ್ಲಿ "ನಮ್ಮ ಮನೆ" ಕಾರ್ಯಕ್ರಮ ದಡಿಯಲ್ಲಿ ಜಾರಿಗೆ ತರಲಾಗಿರುತ್ತದೆ.

ಈ ಯೋಜನೆಯಡಿಯಲ್ಲಿ ಗರಿಷ್ಟ ರೂ. 3,300/- ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಆರ್ಥಿಕವಾಗಿ ಅಶಕ್ತರೆಂದೂ (EWS) ಹಾಗೂ ರೂ. 3,301 ಗಳಿಂದ ರೂ. 7,300 ಒಳಗಿನ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಕಡಿಮೆ ಆದಾಯದ ಗುಂಪು (LIG) ಎಂದು ವರ್ಗೀಕರಿಸಲಾಗಿದೆ. ಇವರುಗಳು ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಈ ಯೋಜನೆಯಡಿಯಲ್ಲಿ ನಿವೇಶನ ಹೊಂದಿರುವ ಎಲ್ಲಾ ಮೇಲ್ಕಾಣಿಸಿದ ವರ್ಗಗಳ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು / ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಂಬಂಧಿಸಿದಂತೆ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ ಅಲ್ಲದೇ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ನಗರ ಬಡಜನರಿಗೆ ಮೂಲ ಸೌಕರ್ಯ ಯೋಜನೆಗಳಡಿ ಆಶ್ರಯ ಒದಗಿಸಲಾಗುವುದು.

ಬೆಂಗಳೂರಿನ ಸರ್ವಜ್ಞನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ

136 (490) ಶ್ರೀ ಜಾರ್ಜ್ ಕೆ.ಜೆ.(ಸರ್ವಜ್ಞನಗರ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ (ಹಳೆ ಸಿ.ಎಂ.ಸಿ ಭಾಗದಲ್ಲಿ ಕಾವೇರಿ ನೀರು ಒದಗಿಸಲು 10 ವರ್ಷಗಳ ಹಿಂದೆ ಕೊಳವೆ ಪೈಪ್ ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ);

ಆ) ಹಾಗಿದ್ದಲ್ಲಿ, ಇದುವರೆಗೆ ನೀರು ಸಂಪರ್ಕ ಒದಗಿಸದೇ ಇರಲು ಕಾರಣವೇನು ಮತ್ತು ಯಾವಾಗ ಸಂಪರ್ಕ ನೀಡಲಾಗುತ್ತದೆ (ಖರ್ಚಾದ ಮೊತ್ತದ ವಿವರ ನೀಡುವುದು);

ಇ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರಕ್ಕೆ ಹೂಡಿಯಿಂದ ಓ.ಎಂ. ಬಿ.ಆರ್ ಜಲಗಾರ ಯೋಜನೆಯಡಿ 4ನೇ ಹಂತ, 2ನೇ ಫೇಸ್ ಕಾವೇರಿ ನೀರು ಸಂಪರ್ಕ ನೀಡಲು ತೆಗೆದುಕೊಂಡ ಕ್ರಮಗಳೇನು; ಯೋಜನೆ ನಿಗದಿ ಮಾಡಿದ ಮೊತ್ತವೆಷ್ಟು (ಕಾಮಗಾರಿ ಪ್ರಾರಂಭವಾದ ವರ್ಷ ಹಾಗೂ ನಿಗದಿ ಮಾಡಿದ ಕಾಲಾವಕಾಶ ಮತ್ತು ಇದುವರೆಗೆ ಖರ್ಚಾದ ಮೊತ್ತದ ವಿವರ ನೀಡುವುದು);

ಈ) ಟಿ.ಕೆ.ಹಳ್ಳಿಯಿಂದ ಕಾವೇರಿ ಪೂರ್ವದ ಕಡೆ ಯಾವುದೇ ನೀರು ಸಂಪರ್ಕ ಇರುವುದಿಲ್ಲ; 4ನೇ ಹಂತದ 2ನೇ ಫೇಸ್ ಈ ನೀರು ಸಂಪರ್ಕ ಪೂರ್ವದ ಕಡೆ ಇದೆಯೇ (ಇದ್ದಲ್ಲಿ ಅದರ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಹಿಂದಿನ ಬ್ಯಾಟರಾಯನಪುರ ನಗರ ಸಭೆಯ 22 ರಿಂದ 31ರ ವಾರ್ಡ್‌ಗಳು ಸೇರಿರುತ್ತವೆ.

ಹಿಂದಿನ ನಗರಸಭೆ ವತಿಯಿಂದ ಅಳವಡಿಸಲಾದ PVC ಪೈಪ್‌ಗಳ ಮೂಲಕ ಕೊಳವೆ ಬಾವಿಯ ನೀರನ್ನು ಸರಬರಾಜು ಮಾಡಲಾಗುತ್ತಿತ್ತು.

2003ರ ಆದೇಶದ ನಂತರ ಬೆಂಗಳೂರು ಜಲಮಂಡಳಿಯು ಹಿಂದಿನ ಬ್ಯಾಟರಾಯನಪುರ ನಗರ ಸಭೆಯ ವ್ಯಾಪ್ತಿಯಲ್ಲಿನ ವಾರ್ಡ್ ನಂ.1 ರಿಂದ 31 ರವರೆಗೆ ಬರುವ ಎಲ್ಲಾ ರಸ್ತೆಗಳಲ್ಲಿ (ಅಂದಾಜು ವೆಚ್ಚ ರೂ.44.00 ಕೋಟಿ) ಸುಮಾರು 400 ಕಿ.ಮೀ. DI ಪೈಪ್‌ಗಳನ್ನು ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆ Ph-I, Ph-II ರ ಅಡಿಯಲ್ಲಿ ಕಾವೇರಿ ನೀರು ಸರಬರಾಜಿಗಾಗಿ 2005 ರಿಂದ 2008ರಲ್ಲಿ ಅಳವಡಿಸಲಾಗಿದೆ.

ಹಾಗೆಯೇ ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆಯ ಮುಖ್ಯ ಕೊಳವೆ ಮಾರ್ಗದ ಗುತ್ತಿಗೆ Package 9C ಅಡಿಯಲ್ಲಿ 1200 ಮಿ.ಮೀ ವ್ಯಾಸದಿಂದ 800 ಮಿ.ಮೀ. ವ್ಯಾಸದವರೆಗೆ Feeder Main ಪೈಪ್‌ಗಳನ್ನು ಅಳವಡಿಸಲಾಗಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. (ಅಂದಾಜು ವೆಚ್ಚ ರೂ.26.00 ಕೋಟಿ)

ಆ) ಜಲಮಂಡಳಿಯ CWSS IV Stage II Phase ಯೋಜನೆ ಅಡಿಯಲ್ಲಿ (ಅಂದಾಜು ವೆಚ್ಚ ರೂ.3384.00 ಕೋಟಿ) ದಿನಂಪ್ರತಿ 500 ದ.ಲ.ಲೀ. ನೀರನ್ನು ನಗರಕ್ಕೆ ಸರಬರಾಜು ಮಾಡುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯ ಕಾಮಗಾರಿಯು 2011–12ರಲ್ಲಿ ಮುಕ್ತಾಯವಾದ ಮೇಲೆ 8 ಹಳೆ ನಗರಸಭೆ/ ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಿಗೆ ಕಾವೇರಿ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆ.

ಇ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀರು ಸರಬರಾಜು ಮಾಡಲು ಕಾವೇರಿ 4ನೇ ಹಂತ, 2ನೇ ಘಟ್ಟದ ಯೋಜನೆಯಡಿಯಲ್ಲಿ ಕನಕಪುರ ರಸ್ತೆ ವಾಜರಹಳ್ಳಿಯಿಂದ ಓ.ಎಂ.ಬಿ.ಆರ್. ಜಲಾಗಾರಕ್ಕೆ 49 ಕಿ.ಮೀ. ಉದ್ದದ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸುತ್ತಿದ್ದು ಇದಕ್ಕೆ ಹೊಂದಿಕೊಂಡಂತೆ ಮೂರು ಭೂಮಟ್ಟದ ಜಲಗಾರಗಳನ್ನು ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಯ ಒಟ್ಟು ಮೊತ್ತ ರೂ. 275 ಕೋಟಿಗಳಾಗಿರುತ್ತದೆ. ಈ ಕಾಮಗಾರಿಗಳು ಜನವರಿ 2010ರಲ್ಲಿ ಪ್ರಾರಂಭವಾಗಿದ್ದು, ಡಿಸೆಂಬರ್ 2011ಕ್ಕೆ ಮುಕ್ತಾಯಗೊಳ್ಳಲಿದೆ (2 ವರ್ಷ). ಮೇಲಿನ ಕಾಮಗಾರಿಗಳು ಇತ್ತೀಚೆಗೆ ಪ್ರಾರಂಭವಾಗಿದ್ದು ಇದುವರೆವಿಗೂ ಯಾವುದೇ ಹಣ ಖರ್ಚಾಗಿರುವುದಿಲ್ಲ.

ಈ) ಬೆಂಗಳೂರಿನ ಪೂರ್ವ ಭಾಗಕ್ಕೆ ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆಯಡಿ ಕನಕಪುರ ರಸ್ತೆ ವಾಜರಹಳ್ಳಿಯಿಂದ ಓ.ಎಂ.ಬಿ.ಆರ್ ಜಲಾಗಾರದವರೆಗೆ 49 ಕಿ.ಮೀ.ಉದ್ದದ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸುತ್ತಿದ್ದು ಇದಕ್ಕೆ ಹೊಂದಿಕೊಂಡಂತೆ ನಾಲ್ಕು ಭೂ ಮಟ್ಟದ ಜಲಗಾರಗಳನ್ನು ನಿರ್ಮಿಸಲಾಗುತ್ತಿದೆ. ಈ ಜಲಗಾರಗಳನ್ನು ಕೂಡ್ಲು, ಹೂಡಿ, ಬಿ.ನಾರಾಯಣಪುರ ಮತ್ತು ಓ.ಎಂ.ಬಿ.ಆರ್. ನಿರ್ಮಿಸುತ್ತಿದ್ದು ಇವುಗಳ ಒಟ್ಟು ಸಾಮರ್ಥ್ಯ 58 ದ.ಲ.ಲೀ.